(2) 1990ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಉಪಸಭಾಧ್ಯಕ್ಷಣಿಯವರು :– ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್‌ರವರ ಪರವಾಗಿ ಪ್ರೊ ಎಂ.ಡಿ. ನಂಜುಂಡಸ್ವಾಮಿಯವರು, "1990ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುವುದು."

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– ಸನ್ಮಾನ್ಯ ಉಪಸಭಾಧ್ಯಕ್ಷಣಿಯವರೆ, ಶ್ರೀ ಬಾಬಾಗೌಡ ರುದ್ರ ಗೌಡ ಪಾಟೀಲ್‌ರವರ ಪರವಾಗಿ 1990ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಸಭಾಧ್ಯಕ್ಷಣಿಯವರು :– ಪ್ರಸ್ತಾಪವೇನೆಂದರೆ "1990ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅನುಮತಿ ನೀಡಿವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಿದ್ದಾಯಿತು.

† ಪ್ರೊ: ಎಂ.ಡಿ. ನಂಜುಂಡಸ್ವಾಮಿ :– ನಾನು 1990ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಸಭಾಧ್ಯಕ್ಷಣಿಯವರು : ವಿಧೇಯಕವನ್ನು ಮಂಡಿಸಲಾಯಿತು.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

1990ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯ ಸಂಹಿತೆ (ಕರ್ನಾಟಕ ತಿದ್ದುಪಡಿ (ವಿಧೇಯಕ)

ಪರ್ಯಾಲೋಚನಾ ಪ್ರಸ್ತಾವ

ಪ್ರೊ : ಎಂ.ಡಿ. ನಂಜುಂಡಸ್ವಾಮಿ :– 1990ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯ ಸಂಹಿತೆ (ಕರ್ನಾಟಕ ತಿದ್ದುಪಡಿ)ಯನ್ನು ಕ್ರಿಮಿನಲ್ ಪ್ರೊಸಿಜರ್ ಕೋಡ್‌ನ ಸೆಕ್ಷನ್ 41ಕ್ಕೆ ಸಂಬಂಧಪಟ್ಟ ಹಾಗೆ ನಾನು ತಂದಿದ್ದೇನೆ. ಸೆಕ್ಷನ್ 41 ಕೋಡ್ ಆಫ್ ಕ್ರಿಮಿನಲ್ ಪ್ರೊಸಿಜರ್ ಏನು ಹೇಳುತ್ತದೆಂಬುದನ್ನು ಓದುವುದಕ್ಕೆ ಮುಂಚೆ ಅದರ ಹಿನ್ನೆಲೆಯನ್ನು ಹೇಳುತ್ತೇನೆ. ಇದು ನಮ್ಮ ದೇಶದ ಕಾನೂನು ವ್ಯವಸ್ಥೆಯಲ್ಲಿ ಬರುವುದಕ್ಕೆ ಕಾರಣ ಬ್ರಿಟಿಷರು. ಬ್ರಿಟಿಷರ ಕಾನೂನು ಪದ್ಧತಿಯನ್ನು ಕ್ರೋಢೀಕರಿಸಿದಂತಹ ಲಾರ್ಡ್ ಮಕಾಲೆಯವರು ಈ ಸೆಕ್ಷನ್ 41 ನಮ್ಮ ಕ್ರಿಮಿನಲ್ ಕಾನೂನಿನಲ್ಲಿ ಅಳವಡಿಸಿದ್ದಾರೆ. ಸೆಕ್ಷನ್ 41 ಈ ರೀತಿ ಇದೆ.

Section-41, para (1) : -

"Any Police Officer may ;without an order from the magistrate and without a warrant, arrest any person: a) Who has been concerned in any cognisable offence or against whom a reasonable complaint has been made or credible information has been received or a reasonable suspicion exits of his having been so concerned or...

b).....

c).....

d)..... e)..... f).....

★★ ★★ ★★

ಪ್ರೊ ಎಂ.ಡಿ. ನಂಜುಂಡಸ್ವಾಮಿ :– ಈ ಕ್ಯಾಟಗರಿಯಲ್ಲಿ ಬರುವಂತಹ ಯಾವುದೇ ವ್ಯಕ್ತಿಯನ್ನು Any Police Officer may without an order from a Magistrate and wihout a warrant arrest ದುರದೃಷ್ಟವಶಾತ್ ಬ್ರಿಟಿಷರ ಕಾಲದ ಕಾನೂನು ನಮ್ಮ ಸಂವಿಧಾನ ಬಂದಮೇಲೂ ಕೂಡ ಉಳಿದುಕೊಂಡಿದೆ. ಸಂವಿಧಾನದ ಆರ್ಟಿಕಲ್ 22

Article 22 (1) reads :

"No person who is arrested shall be detained in custody without being informed as soon as may be of his grounds for such arrest nor shall he be denied right to consult, and to be defended by, a legal practitioner of his choice."

Then Article 22 (2) reads :

"Every person who is arrested and detained in custody shall be produced before the nearest Magistrate within a period of 24 hours of such arrest excluding the time necessary for the journey from the place of arrest to the court of magistrate and no such person shall be detained in custody beyond the said period without the authority of the Magistrate."

ಇದು ನಮಗೆ ಪ್ರತಿ ವ್ಯಕ್ತಿಗೆ ಕೊಟ್ಟಿರುವಂತಹ ಸಂವಿಧಾನದ ಹಕ್ಕುಗಳು. ಆದರೆ ದುರಾದೃಷ್ಟವಶಾತ್ ಕ್ರಿಮಿನಲ್ ಪ್ರೋಸಿಜರ್ ಕೋಡ್ ಅನ್ನು ಅನುಷ್ಠಾನಕ್ಕೆ ತರುತ್ತಾ ನಮ್ಮ ದೇಶದ ಪೋಲೀಸ್ ವ್ಯವಸ್ಥೆ ಆರ್ಟಿಕಲ್ 22 ಅನ್ನು ಪಾಲಿಸುತ್ತಿಲ್ಲ. ಅದಕ್ಕೆ ಮುಂಚೆ ಆರ್ಟಿಕಲ್ 21 ಅನ್ನು ಓದಿ ಹೇಳುತ್ತೇನೆ.

Article 21 reads:

"No person shall be deprived of his life
or personal liberty except according to procedure established by law."

Now the question is, what is the procedure established by law? The procedure established by law has been explained in Article (22).

ಇಷ್ಟು ಇದ್ದರೂ ಈ ತಿದ್ದುಪಡಿಯ ಅವಶ್ಯಕತೆ ಎಷ್ಟಿದೆ ಅನ್ನುವುದಕ್ಕೆ ಉದಾಹರಣೆಯಾಗಿ ಈ ಸದನದಲ್ಲಿ 9ನೇ ಶಾಸನಸಭೆ ಅಧಿವೇಶನದಲ್ಲಿ ಆದಂತಹ ಕೆಲವು ಲಾಕಪ್ ಸಾವುಗಳ ಚರ್ಚೆಯನ್ನು ನಾವು ನೆನಪು ಮಾಡಿಕೊಡಬೇಕು. ತಮಗೆ ಗೊತ್ತಿರಬಹುದು ಲಾಕಪ್ ಸಾವುಗಳ ಬಗ್ಗೆ ಬಹಳ ಚರ್ಚೆ ಮಾನ್ಯ ವೀರೇಂದ್ರ ಪಾಟೀಲರು ಗೃಹ ಮಂತ್ರಿಯಾಗಿದ್ದಾಗ ನಡೆದಿತ್ತು. ಲಾಕಪ್ ಸಾವುಗಳನ್ನು ನಿಲ್ಲಿಸುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಮಾನ್ಯ ಸದಸ್ಯರು ಕೇಳಿದಾಗ, ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದರು. ಅಷ್ಟೆ ಅಲ್ಲ, ಲಾಕಪ್ ಸಾವು ಆಗದೆ ಇರುವ ರೀತಿ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂದು ಕೇಳಿದಾಗ, ಲಾಕಪ್ ಸಾವು ಆಗದೆ ಇರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

"Any police officer can arrest any person without warrant or without an order from a magistrate"

"Provided that nothing in this section or anything contained in any other law for the time being in force shall empower any such arrest without first serving upon *that* person at any time before the arrest, an order in writing signed by the officer arresting him showing the grounds on which the order of arrest has been made and endorsing on such order, the date, the time and the place of arrest and giving an opportunity to the person so arrested to hand over the order of arrest served on him along with the endorsement as stated above to be handed over to any one person of the locality other than a Police Officer reasonably named by him."

ಇದು ಅತ್ಯಂತ ಸರಳವಾದಂತ ತಿದ್ದುಪಡಿ. ಈ ತಿದ್ದುಪಡಿಯಲ್ಲಿ ನಾನು ಕೇಳುತ್ತಿರುವುದು ಸಂವಿಧಾನದಲ್ಲಿರುವ ಹಕ್ಕುಗಳನ್ನು ಈ ಸೆಕ್ಷನ್ 41ರೊಳಕ್ಕೆ ಸೇರಿಸಬೇಕು ಎಂದು. ಆ ತಿದ್ದುಪಡಿ ಸಾರಾಂಶ ಇಷ್ಟೆ. ದಸ್ತಗಿರಿ ಮಾಡಬಹುದು; ಆದರೆ ದಸ್ತಗಿರಿ ಮಾಡುವುದಕ್ಕೆ ಮುಂಚೆ ದಸ್ತಗಿರಿಗೆ ಕಾರಣಗಳು. ದಸ್ತಗಿರಿಯ ಕಾಲ, ಸ್ಥಳ, ಮತ್ತು ದಿವಸ. ಕಾಲ, ಸ್ಥಳ ಮತ್ತು ದಿನಾಂಕವನ್ನು ಲಿಖಿತವಾಗಿ ದಸ್ತಗಿರಿಯಾಗುತ್ತಾ ಇರುವಂಥ ವ್ಯಕ್ತಿಯ ಕೈಗೆ ಕೊಡಬೇಕು. ಮತ್ತೆ ಆತ ಅದನ್ನು ತನಗೆ ಇಷ್ಟಬಂದಂಥ ಪೋಲೀಸ್ ಅಧಿಕಾರಿಯಲ್ಲದಂಥ ವ್ಯಕ್ತಿಗೆ ಅದನ್ನು ಕೊಡುವಂಥ ಅವಕಾಶ ಕಲ್ಪಿಸಿಕೊಡಬೇಕು ಇಷ್ಟೆ ಇದನ್ನು ಈ ಸದನ ಸರ್ವಾನುಮದಿಂದ ಒಪ್ಪಬೇಕು ಎಂದು ಏತಕ್ಕೆ ಕೇಳುತ್ತಿದ್ದೇನೆಂದರೆ, even under preventive detention laws where a person can be detained for more than three months, even without a trial, this protection has been given by the legal system in India.

ಇದನ್ನು ಓದಿ ಹೇಳುತ್ತೇನೆ ನಾನು. ಪ್ರಿವೆನ್‌ಟೀವ್ ಡಿಟೆನ್‌ಷನ್ ಸಂಬಂಧದಲ್ಲಿ ಆರ್ಟಿಕಲ್ 21 ಮತ್ತು 22ನ್ನು ವಿಶ್ಲೇಷಣೆ ಮಾಡುತ್ತಾ ಸುಪ್ರೀಮ್ ಕೋರ್ಟ್ ಹೇಳಿರುವಂಥ ಒಂದು ತೀರ್ಪನ್ನು ನಾನು ಇಲ್ಲಿ ಓದಿ ಹೇಳುತ್ತೇನೆ. ಇದು ಯಾವುದಕ್ಕೆ ಸಂಬಂಧಪಟ್ಟಿದ್ದು ಅಂದರೆ ಎ.ಕೆ. ಗೋಪಾಲನ್ ವರ್ಸಸ್ ಸ್ಟೇಟ್ ಆಫ್ ಮದ್ರಾಸ್. ಪ್ರಿವೆನ್‌ಟೀವ್ ಡಿಟೆನ್‌ಷನ್ ಈ ದೇಶದಲ್ಲಿ ಜಾರಿಗೆ ಬಂದಕೂಡಲೇ ನಡೆದಂಥ ಒಂದು ಮೊಕದ್ದಮೆ ಇದು. ಇದರಲ್ಲಿ ಸುಪ್ರೀಮ್ ಕೋರ್ಟ್ ಆರ್ಟಿಕಲ್ 21 ಮತ್ತು 22ರ ಸಂಬಂಧವನ್ನು ಬಿಡಿಸಿ ಹೇಳಿದೆ.

"Even in case of preventive detention where a person can be detained for more than three months without a trial this protection of giving grounds of arrest in writing with time, place and date should be protected under Article 21."

ಪ್ರಿವೆನ್‌ಟೀವ್ ಡಿಟೆನ್‌ಷನ್ ಆರ್ಟಿಕಲ್ 22 ಪ್ಯಾರಾಗ್ರಾಫ್ 3ರಲ್ಲಿ ಇದೆ. ಅದನ್ನು ಇಂಟರ್‌ಪ್ರಿಟ್ ಮಾಡುತ್ತಾ ಸುಪ್ರೀಮ್ ಕೋರ್ಟ್‌ನಲ್ಲಿ ಹೇಳಿರುವಂಥ ಒಂದು ಪ್ಯಾರಾಗ್ರಾಫ್ ಓದುತ್ತೇನೆ.

"In respect of arrest and detention, article 22(1) and Article 22(2) provides safeguards. These safeguards are excluded in the case of preventive detention by article 22(3). The safeguards in connection with such detention are provided by clauses 4 to 7. It is therefore clear that Article 21 has to be read as supplemented by Article 22 to the extent the procedure as prescribed by article 22, the same is to be observed otherwise article will apply. But if certain procedural safeguards are expressly stated as not required or specifically some certain points of procedure are prescribed it seems improper to interpret this point as not covered by Article 22 and left open for consideration under Article.22"

To the extent the points were dealt with along and included or excluded, Article 22 is a complete code. On the points of procedure which expressly or by necessary implication are not dealt with by Article 22, the operation of Article 21 will remain unaffected." Even under preventive detention laws where a person can be detained without trial for a period of 3 months, Article 21 will remain unaffected. And article 21 provides that no person shall be deprived of his life and personal liberty except according to the procedure established by law.

ಈ ತಿದ್ದುಪಡಿಯನ್ನು ಈ ಸಭೆ ಸರ್ವಾನುಮತದಿಂದ ಒಪ್ಪಬೇಕೆಂದು ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಸಂವಿಧಾನ ಜಾರಿಗೆ ಬಂದಕೂಡಲೇ ನಾವು ಇದನ್ನು ಅಳವಡಿಸಬೇಕಾಗಿತ್ತು. ಅದನ್ನು ಅಳವಡಿಸದೇ ಇರತಕ್ಕ ಕಾರಣದಿಂದ ಪೋಲೀಸರ ದುರ್ನಡತೆ ಈ ಸೆಕ್ಷನ್‌ನ ದುರುಪಯೋಗ ಕೇವಲ ಪೋಲೀಸರದೇ ಅಲ್ಲ. ಈ ಕೆಟ್ಟ ರಾಜಕಾರಣಿಗಳದ್ದೂ ಕೂಡ. ಕೆಟ್ಟ ರಾಜಕಾರಣಿಗಳು ತಮಗೆ ಆಗದವರ ವಿರುದ್ಧ, ಈ ಸೆಕ್ಷನ್ 41ನ್ನು ಉಪಯೋಗ ಮಾಡಿಕೊಂಡು ಕಿರುಕುಳ ಕೊಟ್ಟು ದಬ್ಬಾಳಿಕೆಯನ್ನು ಮಾಡುತ್ತಿದ್ದಾರೆ. ಇಡೀ ಇಂಡಿಯಾದೇಶದಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ಮೊದಲನೇ ಸಾರಿ ಈ ತಿದ್ದುಪಡಿ ಬಂದಿರತಕ್ಕದ್ದು. At least we should be pioneers in securing the fundamental rights and the human rights of the citizens of Karnataka.

ಈ ಕಾರಣದಿಂದ ಈ ತಿದ್ದುಪಡಿಯನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕೆಂದು ನಾನು ಹೇಳುತ್ತಿರುವುದು. ಆದರೆ ದಸ್ತಗಿರಿಗೆ ಕಾರಣಗಳು, ದಸ್ತಗಿರಿಯ ದಿನಾಂಕ, ದಸ್ತಗಿರಿಯ ಸ್ಥಳ, ಮತ್ತು ಕಾಲ ಇವುಗಳನ್ನು ನೀವು ಯಾರನ್ನು ದಸ್ತಿಗಿರಿ ಮಾಡುತ್ತೀರೋ ಅವರಿಗೆ ಬರವಣಿಗೆಯಲ್ಲಿ ಕೊಡಬೇಕು. ಈ ರೀತಿ ಬರೆದು ಕೊಟ್ಟಿದ್ದನ್ನು ಅವನು ತನಗೆ ಇಚ್ಛೆ ಬಂದವರಿಗೆ ಅಂದರೆ ಪೋಲೀಸ್ ಅಧಿಕಾರಿ ಆಲ್ಲದವರಿಗೆ ಕೊಟ್ಟು ಹೋಗುವಂಥ ಅವಕಾಶವನ್ನು ಕಲ್ಪಿಸಿಕೊಡಬೇಕು. ನಾವು ಇವತ್ತು ಇದನ್ನು ಮಾಡದೇ ಹೋದರೆ ಕರ್ನಾಟಕದ ಜನರಮೇಲೆ ನಾವು ಈ ಸೆಕ್ಷನನ್ನು ದುರುಪಯೋಗ ಮಾಡಿಕೊಂಡು ಅವರಮೇಲೆ ದಬ್ಬಾಳಿಕೆಯನ್ನು ಮಾಡುವಂಥ ಕೆಟ್ಟ ರಾಜಕಾರಣಿಗಳು ಎನ್ನತಕ್ಕ ಹೆಸರನ್ನು ನಾವು ಇನ್ನೂ ಉಳಿಸಿಕೊಂಡೇ ಹೋಗಬೇಕಾಗುತ್ತದೆ. ಆದ್ದರಿಂದ ಈ ಸಭೆ ಈ ತಿದ್ದುಪಡಿಯನ್ನು ಸರ್ವಾನುಮತದಿಂದ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ. ನಮಸ್ಕಾರ.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) :– ಸನ್ಮಾನ್ಯ ಉಪಸಭಾಧ್ಯಕ್ಷಣಿಯವರೆ, ಮಾನ್ಯ ಸದಸ್ಯರಾದ ನಂಜುಂಡ ಸ್ವಾಮಿಯವರು ಏನು ಈ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ತಿದ್ದುಪಡಿಯನ್ನು ತಂದಿದ್ದಾರೆ ಇದನ್ನು ನಾನು ಸ್ವಾಗತಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಪ್ರೊಫೆಸರ್‌ರವರು ಹೇಳಿದಂತೆ ಇದು ಕೇವಲ ಸರಳವಾದ ತಿದ್ದುಪಡಿ ಮಾತ್ರವಲ್ಲ, ಬಹಳ ಪ್ರಾಮುಖ್ಯವಾದ ತಿದ್ದುಪಡಿಯೂ ಕೂಡ ಎಂಬುದನ್ನು ನಾವು ಒಪ್ಪಕೊಳ್ಳಬೇಕಾಗುತ್ತದೆ. ಸಂವಿಧಾನದ 21 ಮತ್ತು 22ನೇ ವಿಧಿಗಳ ಪ್ರಾಮುಖ್ಯತೆಯನ್ನು ಈಗಾಗಲೇ ಅವರು ಹೇಳಿದ್ದಾರೆ. ಇದು ಅತ್ಯಂತ ಸರಳವಾದ ತಿದ್ದುಪಡಿ ಎಂದು ಏತಕ್ಕೆ ಹೇಳುತ್ತಿದ್ದೇನೆಂದರೆ, ಅವರು ಯಾವುದೇ ಹೆಚ್ಚಿನ ಬದಲಾವಣೆಯನ್ನು ತಮ್ಮ ಅರ್ಥ ವಿವರಣೆಯಲ್ಲಿ ಹೇಳುವುದಕ್ಕೆ ಹೋಗಿಲ್ಲ. ಇರತಕ್ಕ 41ನೇ ಸೆಕ್ಷನ್‌ನಲ್ಲಿ ಯಾರನ್ನಾದರೂ ದಸ್ತಗಿರಿ ಮಾಡಬೇಕಾದಂಥ ಅಧಿಕಾರ ಈ ಪೋಲೀಸರಿಗೆ ಅದರ ಬಗ್ಗೆ ಇವರು ತಿದ್ದುಪಡಿಯನ್ನು ತಂದಿಲ್ಲ. ದಸ್ತಗಿರಿ ಆದಮೇಲೆ, ದಸ್ತಗಿರಿಯನ್ನು ಮಾಡಿದಂಥ ಆದೇಶ ಏನಿದೆ ಆ ಆದೇಶವನ್ನು ದಸ್ತಗಿರಿಗೆ ಒಳಪಡುವಂಥ ವ್ಯಕ್ತಿಗೆ ಇವರು ಕೊಡಬೇಕು. ಇದರಲ್ಲಿ ಆ ವ್ಯಕ್ತಿ ಎಲ್ಲಿ ದಸ್ತಗಿರಿಯಾದರು, ಯಾವತ್ತು ಆದರು, ಮತ್ತು ಯಾವ ವೇಳೆಯಲ್ಲಿ ಆದರು ಎಂಬುದನ್ನು ನಮೂದು ಮಾಡಿ ಸಂಬಂಧಪಟ್ಟವರಿಗೆ ಕೊಡಬೇಕು; ಅಷ್ಟೇ ಅಲ್ಲ ಆ ದಸ್ತಗಿರಿ ಆದಂಥ ವ್ಯಕ್ತಿ ತನಗೆ ಇಷ್ಟಬಂದವರಿಗೆ ಈ ಆದೇಶದ ಪ್ರತಿಯನ್ನು ಪೋಲೀಸ್ ಅಧಿಕಾರಿಗಳನ್ನು ಹೊರತುಪಡಿಸಿ ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿದ್ದಾರೆ. ಇದು ನೋಟಕ್ಕೆ ಬಹಳ ಸರಳವಾದರೂ ಕೂಡ ಯಾವ ಜನಸಾಮಾನ್ಯರು ಈ ಪೋಲೀಸರ ದೌರ್ಜನ್ಯಕ್ಕೆ ಒಳಗಾಗುತ್ತಾರೆ ಅವರ ಹಿತವನ್ನು ಕಾಪಾಡುವುದರಲ್ಲಿ ಇದು ಬಹಳ ಮಹತ್ವಪೂರ್ಣ ತಿದ್ದುಪಡಿ ಮಸೂದೆ ಆಗಿದೆ ಎಂದು ಹೇಳಬಯಸುತ್ತೇನೆ.

ಅನೇಕ ಸಂದರ್ಭಗಳಲ್ಲಿ ನಾವು ಹೇಳುತ್ತೇವೆ, ಪೋಲೀಸರ ದೌರ್ಜನ್ಯಕ್ಕೆ ಒಳಗಾದ ಈ ಆವೇಶದ ಜನ ಅದರಲ್ಲೂ ಸಹ ದುರ್ಬಲವರ್ಗಕ್ಕೆಸೇರಿದ್ದು ಕಾನೂನಿನಿಂದ ರಕ್ಷಣೆಯನ್ನು ಪಡೆದುಕೊಳ್ಳುವುದಕ್ಕೆ ಅಶಕ್ತರಾಗಿದ್ದಾರೆ ಅಂಥವರ ದೃಷ್ಟಿಯಿಂದ ಇದು ಅತ್ಯಂತ ಅವಶ್ಯಕ. ಯಾರು ಈ ಕಾನೂನನ್ನು ಮುರಿದು ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿದೆ ಅವರಿಗೆ ಇದರ ಅವಶ್ಯಕತೆ ಇಲ್ಲದಿರಬಹುದು. ಆದರೆ ಇಂಡಿಯಾ ದೇಶದಲ್ಲಿ ಬಡವರು ಯಾರಿದ್ದಾರೆ. ರಾಜಕೀಯ ಕಾರಣಕ್ಕೋಸ್ಕರ ಪೋಲೀಸರನ್ನು ಉಪಯೋಗ ಮಾಡಿಕೊಳ್ಳತಕ್ಕಂಥ ಕೆಟ್ಟ ರಾಜಕಾರಣಿಗಳು ಯಾರಿದ್ದಾರೆ ಅವರ ಬಗ್ಗೆ ಕೂಡ ನಾವು ಯೋಜನೆ ಮಾಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ರಾಜಕೀಯ ಕಾರಣಕ್ಕೋಸ್ಕರ ನಿರಪರಾಧಿಗಳನ್ನು ದಸ್ತಗಿರಿ ಮಾಡಿ ಪೋಲೀಸ್ ಸ್ಟೇಷನ್‌ನಲ್ಲಿಟ್ಟು ಅನೇಕ ದಿವಸಗಳವರೆಗೆ ಹಿಂಸೆಕೊಟ್ಟು ನಂತರ ಹೊರಗೆ ಬಿಟ್ಟಿರುವುದನ್ನೂ ಅಷ್ಟೇ ಅಲ್ಲ ಸಾಯಿಸಿರುವುದನ್ನೂ ನಾವು ನೋಡಿದ್ದೇವೆ; ಕೇಳಿದ್ದೇವೆ ಇದು ಕೇವಲ ರಾಜಕಾರಣಿಗಳಿಂದ ಮಾತ್ರವಲ್ಲ ಅನೇಕ ಸಂದರ್ಭಗಳಲ್ಲಿ ಸಮಾಜದ ಪಟ್ಟಭದ್ರ ಹಿತಾಸಕ್ತಿಗಳೂ ಕೂಡ ತಮ್ಮ ವಿರೋಧಿಗಳಿಗೆ ಈ ರೀತಿ ತೊಂದರೆ ಕೊಟ್ಟು ಸೇಡು ತೀರಿಸಿಕೊಂಡಿರುವುದೂ ಉಂಟು.

ಅದಕ್ಕಿಂತ ಹೆಚ್ಚಾಗಿ ಪೋಲೀಸ್‌ನವರು ತಮಗಿರತಕ್ಕಂಥ ಅಧಿಕಾರದ ಇತಿಮಿತಿಯನ್ನು ಅರಿಯದೆ ಗೊತ್ತಾಗಿಯೋ ಗೊತ್ತಾಗದೆಯೋ ಅನೇಕ ಸಂದರ್ಭಗಳಲ್ಲಿ ಅವರ ಒಂದು ಕೆಟ್ಟ ಚಟದಿಂದ ನಡೆಯತಕ್ಕ ದೌರ್ಜನ್ಯದಿಂದ ಈ ದೇಶದಲ್ಲಿ, ಈ ರಾಜ್ಯದಲ್ಲಿ ಅನೇಕ ಜನ ಲಾಕಪ್‌ನಲ್ಲಿ ಸತ್ತಿರುವುದನ್ನು ಸಹ ನಾವು ಚರ್ಚೆ ಮಾಡಿದ್ದೇವೆ. ಅಂಥ ಎಲ್ಲ ಸಂದರ್ಭದಲ್ಲೂ ಸಹ ಇಂಥ ಪ್ರತೀತಿ ಆಗದಂತೆ ನೋಡಿಕೊಳ್ಳುತ್ತೇವೆನ್ನುವ ಮಾತನ್ನು ಆಡಳಿತದಲ್ಲಿರುವಂಥ ಯಾವುದೇ ಪಕ್ಷ ಸಹ ಹೇಳುತ್ತಾ ಬಂದಿದೆ. ಆದರೆ ಅದಕ್ಕೆ ಬೇಕಾದಂಥ ರಕ್ಷಣೆಯನ್ನು ಕಾನೂನಿನ ರಕ್ಷಣೆಯನ್ನು ಜನರಿಗೆ ಕೊಡಲಿಕ್ಕೆ ನಾವು ವಿಫಲರಾಗಿದ್ದೇವೆ. ಅದನ್ನು ಮನಗಂಡು ಈವತ್ತಿನದಿವಸ ಈ ಒಂದು ತಿದ್ದುಪಡಿಯನ್ನು ತರುವುದರ ಮುಖಾಂತರ ಮಾನ್ಯ ನಂಜುಂಡಸ್ವಾಮಿಯವರು ಇದರ ಮಹತ್ವವನ್ನು ನಮಗೆ ಹೇಳಿದ್ದಾರೆ. ಇದನ್ನು ಸರ್ಕಾರ ಒಪ್ಪುತ್ತದೆಂದು ನಾನು ಸಹ ಭಾವಿಸಿದ್ದೇನೆ. ಇದರಲ್ಲಿ ಅವರು ಒಪ್ಪದೆ ಇರಬೇಕಾದಂಥ ಅಂಶ ಯಾವುದೂ ಇಲ್ಲ. ಯಾರನ್ನೋ ತಾವು ಇವತ್ತಿನದಿವಸ ದಸ್ತಗಿರಿ ಮಾಡುತ್ತೀರಿ. ದಸ್ತಗಿರಿ ಮಾಡಿದವರಿಗೆ ಆ ಆದೇಶದ ಪ್ರತಿಯನ್ನು ಮತ್ತೆ ಯಾವಾಗ ದಸ್ತಗಿರಿ ಮಾಡಿದಿರಿ, ಯಾವವೇಳೆಯಲ್ಲಿ ಯಾವದಿವಸ ಮಾಡಿದಿರಿ ಎಂಬ ಮಾತನ್ನು ಒಂದು ಎಂಡಾರ್ಸ್‌ಮೆಂಟ್ ಮೂಲಕ ಕೊಡಬೇಕು. ಮತ್ತೆ ಕೊಟ್ಟಿದ್ದನ್ನು ಅವನು ಇಷ್ಟಪಟ್ಟವರಿಗೆ ಕಳಿಸುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕೆಂಬ ಮಾತನ್ನು ಹೇಳಿದ್ದಾರೆ.

ಇದರಲ್ಲಿ ವಿಶೇಷವಾದಂಥದ್ದು, ಸರ್ಕಾರದವರು ಒಪ್ಪದೆ ಇರುವಂಥದ್ದು ಯಾವುದೇ ಅಂಶವಿಲ್ಲ. ಆದ್ದರಿಂದ ಈ ದೇಶದಲ್ಲಿ ಪೋಲೀಸ್ ದೌರ್ಜನ್ಯ, ಅಥವಾ ಪೋಲೀಸರ ಮಿತಿಮೀರಿದ ಅಧಿಕಾರವನ್ನು ಅನಾವಶ್ಯಕವಾಗಿ ಉಪಯೋಗಿಸುವುದನ್ನು ತಪ್ಪಿಸುವುದಕ್ಕೋಸ್ಕರ ಸಮಾಜದಲ್ಲಿರುವ ಅಗತ್ಯವನ್ನು ರಕ್ಷಣೆ ಮಾಡುವುದಕ್ಕೋಸ್ಕರ ಈ ತಿದ್ದುಪಡಿಯಿದೆ. ಅವರು ಒಪ್ಪಬೇಕು. ಮತ್ತು ಅದಕ್ಕೆ ನನ್ನ ಬೆಂಬಲವಿದೆ ಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷಣೆಯವರೇ ಮಾನ್ಯ ನಂಜುಂಡಸ್ವಾಮಿಯವರು ತಂದಿರತಕ್ಕಂಥ ಈ ಒಂದು ಮಸೂದೆಯ ತಿದ್ದುಪಡಿಯ ಬಗ್ಗೆ ಕೆಲವೊಂದು ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಬಹುಶಃ ಇದರ ಆಗುಹೋಗುಗಳು ಇದರ ಪರಿಸ್ಥಿತಿ, ಇದರ ಕಷ್ಟ ಸಾಮಾನ್ಯವಾಗಿ ಆಗಾಗ್ಗೆ ಹೋರಾಟಮಾಡಿ, ಚಳುವಳಿಗಳನ್ನು ಮಾಡಿ ಬಂಧನಕ್ಕೆ ಹೋಗತಕ್ಕಂಥವರಿಗೆ ಮಾತ್ರ ಇದರ ಪರಿಸ್ಥಿತಿ ಅರ್ಥವಾಗುತ್ತದೆ. ಇದು ಎಂದೂ ಗೊಂದಲಕ್ಕೆ ಹೋಗದೆ, ಗಂಭೀರವಾಗಿ ಮಹಾ ದೊಡ್ಡ ಅಧಿಕಾರದಲ್ಲಿ ಕುರ್ಚಿಯಲ್ಲಿ ಕುಳಿತುಕೊಂಡು ಹೋಗತಕ್ಕಂಥವರಿಗೆ ಬಹುಶಃ ಅವರಿಗೆ ಇದು ಸ್ಪಂದಿಸುತ್ತಿಲ್ಲ. ನಾನು ಹೇಳುತ್ತಿದ್ದೇನೆ, ಇಡೀ ಪೋಲೀಸ್ ಕಾಯಿದೆ ಸಮಗ್ರವಾಗಿ ಪೋಲ್ಲೀಸ್ ಕಾಯಿದೆ ಬದಲಾವಣೆಯಾಗಬೇಕು. ಏತಕ್ಕೆಂದರೆ ಈ ಪೋಲೀಸ್ ಕಾಯಿದೆ ಯಾವುದೋ ಒಂದು ಓಬಿರಾಯನ, ಬ್ರಿಟೀಷರಕಾಲದ ಕಾಯಿದೆ. ಆ ಕಾಯಿದೆಯನ್ನು ಸ್ವಲ್ಪ ಸ್ವಲ್ಪ ತಿದ್ದುಪಡಮಾಡಿಕೊಂಡು ಈ ಪುಟಗಳನ್ನು ಬೆಳೆಸುತ್ತಾ ಇದ್ದೇವೆ. ತಿದ್ದುಪಡಿ ಮಾಡಿ ಮೊನ್ನೆ ಕೂಡ ಟಾಡಾ ಕಾಯಿದೆಯನ್ನು ತರುತ್ತಿದ್ದೀರಿ. ಇದನ್ನು ತಾವು ಸರ್ವಾನುಮತದಿಂದ ನಿರ್ಣಯ ಮಾಡುತ್ತಿದ್ದೀರಿ. ಟಾಡಾ ಕಾಯಿದೆ ಬಗ್ಗೆ ಇಲ್ಲಿ ಚರ್ಚೆಯಾಗಿದೆ, ತಮಗೆ ಗೊತ್ತಿದೆ ಎಂದು ಹೇಳುತ್ತಿದ್ದಾರೆಯೇ ಹೊರತು ಬೇರೆ ಮಾತೇ ಇಲ್ಲ. ಯಾರನ್ನಾದರು ಬಂಧನ ಮಾಡಿದರೆ ಅವನು ಎಲ್ಲಿ ಹೋಗುತ್ತಾನೆ, ಅವನ ಪರಿಸ್ಥಿತಿ ಏನೆಂಬುದು ಆ ಟಾಡಾ ಅನುಭವಿಸಿದವರಿಗೆ ಮಾತ್ರ ಗೊತ್ತಾಗುತ್ತದೆ. ಇನ್ನೂ P. No. 216 ಯಾರಿಗೂ ಆದರ ಮಹತ್ವ ಮತ್ತೆ ಆದರ ಬಳಿ, ಗಾಳಿ, ಬಿಸಿಲು, ಯಾರಿಗೂ ತಟ್ಟುವುದಿಲ್ಲ. ಟಾಡಾ ಕಾಯಿದೆ. ಕಾಯಿದೆ ಯಾರಿಗಾದರು ತಟ್ಟಿದರೆ ಅದು ಏನೇನು, ಎಲ್ಲಿಗೆ ಹೋಗುತ್ತದೆ ಏನು ಪರಿಸ್ಥಿತಿನೋ.

ಒಬ್ಬ ಮಾನ್ಯ ಸದಸ್ಯರು :– ನಿಮಗೆ ಹಾಕಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :– ನನಗಾ, ಇಲ್ಲ, ಏನಾದರು ಕಾಯಿದೆಯಲ್ಲಿ ಪ್ರಾಮಾಣಿಕವಾಗಿ ಹಾಕಬೇಕಾದರೆ ನಮಗೆ ಮೊದಲು ಹಾಕಬೇಕಾಗುತ್ತದೆ. ಈ ದೇಶದಲ್ಲಿ ಪ್ರಾಮಾಣಿಕ ಸರ್ಕಾರ ಬಂದರೆ ನಿಮ್ಮನ್ನು ಹಾಕಲೇಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷಣೆಯವರೇ.....

ಒಬ್ಬ ಮಾನ್ಯ ಸದಸ್ಯರು :– ಜಾಸ್ತಿ ಮಾತನಾಡುವವರು ಮಾನ್ಯ ವಾಟಾಳ್ ನಾಗರಾಜ್‌ರವರೇ.

ಶ್ರೀ ವಾಟಾಳ್ ನಾಗರಾಜ್ :– ಈಗ ನೋಡಿ ಇವರು ಶಾಸನ ಸಭೆಗೆ ಬಂದರಲ್ಲ, ಏನೋ ಪುಣ್ಯ. ಟಾಡಾ ಕಾಯಿದೆಯಲ್ಲಿ ಹೋಗಬೇಕಾಗಿತ್ತು. ಆದರೆ ನಮ್ಮ ಶಾಸನ ಸಭೆಗೆ ಬಂದಿದ್ದಾರೆ. ಆಡಳಿತಲ್ಲಿರತಕ್ಕಂಥವರಿಗೆ ಯಾರಿಗೂ ಟಾಡ ಆಗುವುದಿಲ್ಲ. ನೀವು ಅಧಿಕಾರ ಕಳೆದುಕೊಂಡಾಗ ಟಾಡಾ ಯಾವುದಾದರೂ ಒಂದು ಕಾಲಕ್ಕೆ ಬರದೆ ಇರುವುದಿಲ್ಲ.

ಶ್ರೀ ಎಂ.ಪಿ. ವೆಂಕಟೇಶ್ :– ಅಧಿಕಾರ ಕಳೆದುಕೊಂಡಮೇಲೆ ನಿಮ್ಮ ಮೇಲೆ ಬರುವುದು ಬಹಳ ಯೋಚನೆ ಮಾಡಿ ನೀವು...(ನಗು)

ಶ್ರೀ ವಾಟಾಳ್ ನಾಗರಾಜ್ :– ನನಗನಿಸುತ್ತದೆ, ಸುಖವಾಗಿ ತಾವು ಬಹುಮತ ಇದ್ದೀರಿ. ಇದೇ ಬಹುಮತ ತಮಗೆ ಯಾವಾಗಲು ಇರುತ್ತದೆಂದು ತಿಳಿದುಕೊಳ್ಳಬೇಕಾಗಿಲ್ಲ. ಕೆಲವು ವಿಚಾರಗಳನ್ನು ಹೇಳುತ್ತೇನೆ, ಇಲ್ಲಿ ಟಾಡಾ ಕಾಯಿದೆಯ ಸೆಕ್ಷನ್ 151ರಲ್ಲಿ ಮುನ್ನೆಚ್ಚರಿಕೆಯ ಬಂಧನ ಎಂದು ಇದೆ. ಈ ಮುನ್ನೆಚ್ಚರಿಕೆಯ ಬಂಧನಕ್ಕೆ ಯಾವ ಒಂದು ತಿಳಿವಳಿಕೆಯು ಇಲ್ಲ. ತಲೆ ಇಲ್ಲ, ಬಾಲ ಇಲ್ಲ, ಕೈ ಕಾಲು ಇಲ್ಲ, ಯೋಚನೆ ಇಲ್ಲ, ಏನೂ ಇಲ್ಲ. ಯಾರನ್ನು ಬೇಕಾದರೂ ಯಾವ ಸ್ಥಳದಲ್ಲಿ ಇದ್ದರೂ ಆ ಸ್ಥಳದಲ್ಲಿ ಹೇಳದೆ ಕೇಳದೆ ಬಂಧನಕ್ಕೆ ತೆಗೆದುಕೊಂಡು ಹೋಗಬಹುದು. ಇದು ಒಂದು ದೊಡ್ಡ ತಪ್ಪು ಮಾಡಿದ್ದಾರೆ. ಸೆಕ್ಷನ್ 151ರ ಪ್ರಕಾರ ನನ್ನನ್ನು ಸಾವಿರಾರು ಸಾರಿ ಬಂಧಿಸಿದ್ದಾರೆ. ಬಂಧನ ಮತ್ತು ಪೀಡುಗಡೆಯ ಅನುಭವದ ಮೇಲೆ ಹೇಳುತ್ತಿದ್ದೇನೆ. ಬಂಧನ ಆದತಕ್ಷಣ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ, ಬಂಧಿಸಿದ್ದೇವೆ ಎಂದು. ನ್ಯಾಯಾಧೀಶರು ಜೈಲಿಗೆ ಕಳುಹಿಸಬೇಕೆಂದರೆ ಅಲ್ಲಿಗೆ ಕರೆದುಕೊಂಡು ಹೋಗುವುದು, ಬಿಡಿ ಎಂದರೆ ಕೃಪ ಮಾಡಿ ಬಿಡುವುದು. ಈ ಒಂದು ಪರಿಪಾಠವನ್ನು ಇಟ್ಟುಕೊಂಡಿದ್ದಾರೆ.

ಶ್ರೀ ಎಸ್.ಬಿ. ನಂಜಪ್ಪ :– ಕಾಯಿದೆ ಒಗ್ಗೆ ಜಂತರ್ ಮೂಡಿ ಏನು ಮಾಡಬೇಕೆಂದು ನಿಮ್ಮ ಅಭಿಪ್ರಾಯ ಹೇಳಿದರೆ ಒಳ್ಳೆಯದು. ಅದು ಬಿಟ್ಟು ಕಾಯಿದೆ ಒಗ್ಗೆ ಏಕೆ ಹೊತ್ತಿದ್ದೀರಿ?

ಶ್ರೀ ವಾಟಾಳ್ ನಾಗರಾಜ್ :– ಒಳ್ಳೆಯದಾಗಲಿ ಎಂದು ಕೆಲವು ವಿಚಾರಗಳನ್ನು ಹೇಳುತ್ತಿದ್ದೇನೆ. ತಾವು ಮಾತನಾಡುವಿರಂತೆ ಬಿಳಿಸುತ್ತೀರಿ. ನಿಮ್ಮನ್ನು ಕರೆದಾಗ ಮಾತನಾಡಿ. ಈಗ ನನ್ನನ್ನು ಮಾತನಾಡುವುದಕ್ಕೆ ಕರೆದಿದ್ದಾರೆ. ನಂಜಪ್ಪನವರಿಂದ ನಾನು ಮಾತನಾಡುವುದನ್ನು ಕಲಿತುಕೊಳ್ಳಬೇಕಾಗಿಲ್ಲ. ಈ ಸುದರ್ಭದಲ್ಲಿ ಪ್ರೊ. ನಂಜುಂಡ ಸ್ವಾಮಿಯವರು ತಂದಿರತಕ್ಕ ತಿದ್ದುಪಡಿ ವಿಧೇಯಕವನ್ನು ಬೆಂಬಲಿಸಿ, ಈ ತಿದ್ದುಪಡಿಯನ್ನು ಇಲ್ಲಿ ಸರ್ವಾನುಮತದಿಂದ ಒಪ್ಪಬೇಕೆಂದು ಕೇಳಿಕೊಂಡು ಇದಕ್ಕೆ ಬೆಂಬಲವಾಗಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ107ನೇ ಸೆಕ್ಷನ್ ಏನಿದೆ ಅದರ ಪ್ರಕಾರ ಯಾರನ್ನು ಬೇಕಾದರೂ ಒಳಗೆ ಹಾಕಿಬಹುದು. ಯಾವುದೇ ಒಂದು ದೊಂಬಿಯಾದರೂ ಆ ಕಡೆ 20 ಈ ಕಡೆ 20 ಜನರನ್ನು ಒಳಗೆ ಹಾಕಿಬಹುದು. ಈ ಒಂದು ತಿದ್ದುಪಡಿ ಮಸೂದೆಯನ್ನು ಇಲ್ಲಿ ಯಾರು ಒಪ್ಪುವುದಿಲ್ಲವೆಂದು ಗೊತ್ತು. ಅದು ನಂಜುಂಡಸ್ವಾಮಿಯವರಿಗೂ ಗೊತ್ತಿದೆ. ಆದರೂ ಒಪ್ಪಿ ಎಂದು ನಾವು ನೀವು ಎಲ್ಲ ಇಲ್ಲಿ ಹೇಳುತ್ತಿದ್ದೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ನಾನು ಮಾತ್ರ ಸರ್ಕಾರದ ಒಗ್ಗೆ ಇನ್ನೂ ವಿಶ್ವಾಸವನ್ನು ಕಳೆದುಕೊಂಡಿಲ್ಲ. ಆದುದರಿಂದ ಈ ತಿದ್ದುಪಡಿಯನ್ನು ಸರ್ವಾನುಮತದಿಂದ ಈ ಸಭೆ ಒಪ್ಪುತ್ತದೆಂಬ ವಿಶ್ವಾಸವನ್ನು ಇಟ್ಟುಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :– ನಂಜುಂಡಸ್ವಾಮಿಯವರು ಮಾತನಾಡುವಾಗ ಆಶಾಭಾವನೆಯಿಂದ ಮುಂದಿನ ಭವಿಷ್ಯವನ್ನು ನುಡಿದಿದ್ದಾರೆ. ಸರ್ಕಾರದವರು ಒಪ್ಪುತ್ತಾರೆ, ಸಭೆ ಸರ್ವಾನುಮತದಿಂದ ಒಪ್ಪುತ್ತದೆಂಬ ನಂಬಿಕೆ ಅವರಿಗೆ ಇದೆ. ಇನ್ನು ಅರ್ಧ ಗಂಟೆ ಕಳೆಯಲಿ, ಈ ಮಸೂದೆ ಏನಾಗುತ್ತದೆಂದು ಅವರಿಗೆ ಗೊತ್ತಾಗುತ್ತದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ :– ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದು ಮಾನವೀಯ ಹಕ್ಕುಗಳಿಗೆ ಸಂಬಂಧಪಟ್ಟದ್ದು. ಮಾನವೀಯ ಹಕ್ಕಗಳನ್ನು ದಮನ ಮಾಡುವ ಸೌತ್ ಆಫ್ರಿಕಾದ ಪ್ರಧಾನಿಗಳು ಇಲ್ಲಿ ಕುಳಿತಿಲ್ಲ. ಇಲ್ಲಿ ಕುಳಿತಿರುವವರು ಮಾನವೀಯ ಹಕ್ಕುಗಳಿಗೆ ಗೌರವ ಕೊಡುವವರು ಎಂದು ನಾನು ತಿಳಿದಿರುವುದರಿಂದ ವಿಶ್ವಾಸ ಇದೆ.

ಶ್ರೀ ವಾಟಾಳ್ ನಾಗರಾಜ್ :– ನಂಜುಂಡಸ್ವಾಮಿಯವರಿಗೆ ಒಂದು ವರ್ಷವಾದರೂ ಆಡಳಿತ ಪಕ್ಷದ ಗುಟ್ಟು ಇನ್ನೂ ಅರ್ಥವಾಗಿಲ್ಲ. ಇನ್ನು 15–20 ನಿಮಿಷಗಳಲ್ಲಿ ಮಸೂದೆಯ ಭವಿಷ್ಯ ಏನಾಗುತ್ತದೆಂದು ಗೊತ್ತಾಗುತ್ತದೆ. ಅವರು ಇದನ್ನು ಒಪ್ಪಿದರೆ ನಿಜವಾಗಿ ನಾನು ಎರಡೂ ಕೈ ಜೋಡಿಸಿ ಅವರಿಗೆ ಕೈ ಮುಗಿಯುತ್ತೇನೆ.

ಶ್ರೀ ಎಂ. ಮುನಿಸ್ವಾಮಿಯವರು :– ಅಧ್ಯಕ್ಷರೆ...

ಶ್ರೀ ವಾಟಾಳ್ ನಾಗರಾಜ್ :– ಆ ಒಂದು ಧೈರ್ಯ ಇಲ್ಲದೆ ಇರತಕ್ಕ ನಿಮ್ಮ ಮುಂದೆ ನಾನು ಮಾತನಾಡುತ್ತಿದ್ದೇನೆ. ಆದ್ದರಿಂದ ಅಧ್ಯಕ್ಷರೆ, ಕೋಣನ ಮುಂದೆ ಕಿಂದರಿ ಬಾರಿಸಿದಹಾಗೆ ಆಗಿದೆ, ತೌಡು ಕುಟ್ಟುವುದಿಲ್ಲ. ಆದ್ದರಿಂದ ನಿಮಗೆ ಪ್ರಾಮಾಣಿಕತೆ ಇದ್ದರೆ (ಆಡಳಿತ ಪಕ್ಷದ ಸದಸ್ಯರನ್ನು ಕುರಿತು), ನಿಮಗೂ ಸ್ವಲ್ಪ ಮಾನವೀಯ ಹಕ್ಕುಗಳ ಬಗ್ಗೆ ನಂಬಿಕೆ ಇದ್ದರೆ, ಮನುಷ್ಯತ್ವ ಇದ್ದರೆ, ಈ ವಿಧೇಯಕವನ್ನು ಸರ್ವಾನುಮತದಿಂದ ಒಪ್ಪಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :– ಮಾನ್ಯ ಅಧ್ಯಕ್ಷೆಯವರೆ, ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ಪ್ರೊಫೆಸರ್ ನಂಜುಂಡಸ್ವಾಮಿ ಅವರು ತಿದ್ದುಪಡಿಯನ್ನು ತಂದಿರತಕ್ಕದ್ದು ನಿಜವಾಗಿಯೂ ಸ್ವಾಗತಾರ್ಹ. ಬ್ರಿಟಿಷ್ ಸಾಮ್ರಾಜ್ಯ ಶಾಹಿಯಲ್ಲಿ ನಾವು ಗುಲಾಮಗಿರಿಯಲ್ಲಿ ಇದ್ದವು. ಬ್ರಿಟಿಷರು ನಮ್ಮನ್ನು ಗುಲಾಮರಾಗಿ ಆಳುತ್ತಿದ್ದಾಗ ಇದ್ದ ಕಾನೂನು ಇವತ್ತೂ ಪ್ರಜಾಪ್ರಭುತ್ವ ಬಂದಮೇಲೆ ನಮ್ಮ ದೇಶದಲ್ಲಿ ಇದೆ. ಆಗ ನಮಗೆ ಹಕ್ಕುಗಳು ಇರಲಿಲ್ಲ. ಸಮಾನವಾದ ಹಕ್ಕುಗಳು ಇರಲಿಲ್ಲ. ಆಳುವವರು ಬ್ರಿಟಿಷರು. ನಾವು ಆಳಿಸಿಕೊಳ್ಳುವವರಾಗಿದ್ದೆವು. ಸಂವಿಧಾನ ಬಂದನಂತರ ಪ್ರತಿಯೊಬ್ಬ ನಾಗರೀಕನಿಗೂ ಆಳುವ ಹಕ್ಕು, ಆಳಿಸಿಕೊಳ್ಳುವ ಹಕ್ಕು ಈ ಪದ್ಧತಿ ಜಾರಿಯಲ್ಲಿರುವುದರಿಂದ ಈ ಕಾನೂನು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಏನಿದೆ ಅದು ಬದಲಾಗಬೇಕು. ಯಾವ ಕಾರಣಕ್ಕೆ ಅವನನ್ನು ಅರೆಸ್ಟ್ ಮಾಡಿದರು, ಯಾವ ಕಾರಣಕ್ಕೆ ಅವನನ್ನು ಜೈಲಿಗೆ ಕಳುಹಿಸಿದರು, ಯಾವ ವೇಳೆಯಲ್ಲಿ ಯಾವ ಸ್ಥಳದಲ್ಲಿ, ಯಾವ ಕಾರಣಕ್ಕೆ ಎಂದು ಗೊತ್ತಾಗದೇ ಇರುವ ಅನೇಕ ಸಂದರ್ಭಗಳು ತಮಗೆ

ಗೊತ್ತಿದೆ. ಈ ರೀತಿ ಆಗಿ ಕೆಲವು ಸಾರಿ ಮದ ಏರಿದಾಗ ಯಾವುದೇ ಕಾರಣಗಳೂ ಇಲ್ಲದೆ, ಎಲ್ಲರೂ ಎಂದು ಹೇಳುವುದಿಲ್ಲ, ಮದ ಏರಿದಾಗ ಅಧಿಕಾರಿಗಳಿರಬಹುದು, ರಾಜಕಾರಣಿಗಳಿರಬಹುದು ಒಂದು ಅಸ್ತ್ರವನ್ನು ಜನರನ್ನು ಕಾಪಾಡುವುದಕ್ಕೆ ಕೊಟ್ಟಾಗ ಆ ಅಸ್ತ್ರವನ್ನು ಜನರನ್ನು ಕಾಪಾಡುವುದಕ್ಕೂ ಉಪಯೋಗಿಸಬಹುದು, ಅವರ ಕುತ್ತಿಗೆಯನ್ನು ತೆಗೆಯುವುದಕ್ಕೂ ಉಪಯೋಗಿಸಬಹುದು. ಆ ರೀತಿ ಕಾನೂನುಬದ್ಧವಾಗಿ ಇಲ್ಲಿ ಕೊಟ್ಟಿರತಕ್ಕ ಅಧಿಕಾರ ಇದೆ. ತಪ್ಪು ಮಾಡಿರುವವರನ್ನು ಅರೆಸ್ಟ್ ಮಾಡುವುದಕ್ಕೆ ಹಕ್ಕು ಕೊಡಬೇಕು, ಕೊಟ್ಟಿದ್ದಾರೆ. ಕೊಡಬಾರದು ಎಂದು ಹೇಳುವುದಿಲ್ಲ ನಂಜುಂಡ ಸ್ವಾಮಿಯವರು. ನೀವು ವಾರೆಂಟ್ ಇಲ್ಲದ ಅರೆಸ್ಟ್ ಮಾಡಬಹದು. ಆದರೆ ಯಾವ ಕಾರಣಕ್ಕೆ, ಯಾವ ವೇಳೆಯಲ್ಲಿ ಯಾವ ತಾರೀಖಿಗೆ, ಯಾರನ್ನು ಬಂಧಿಸಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಹೇಳಿದರೆ ತಪ್ಪಿಲ್ಲ. ಮಾನ್ಯ ಅಧ್ಯಕ್ಷಡೆಯವರೆ, ನಾವು ಇವತ್ತು ನೋಡುತ್ತಿದ್ದೇವೆ. ಅನೇಕ ಸಂದರ್ಭಗಳಲ್ಲಿ ರಾಜಕೀಯ ಒತ್ತಡಕ್ಕಾಗಿ ಅಧಿಕಾರಿಗಳು ಅಧಿಕಾರ ದುರುಪಯೋಗ ಮಾಡಿರುವುದು ಆಗಿದೆ. ಪೋಲೀಸರು ಸೇಡಿನ ಮನೋಭಾವನೆ ತೀರಿಸಿಕೊಳ್ಳುವುದಕ್ಕಾಗಿ ವಿನಾಕಾರಣ ಜೈಲಿನಲ್ಲಿ ನಾಗರೀಕನನ್ನು ಹಾಕುತ್ತಿದ್ದಾರೆ. ಯಾವುದೇ ಕಾರಣ ಇಲ್ಲ. ಯಾವ ವ್ಯಕ್ತಿಯನ್ನು ಎಲ್ಲಿಟ್ಟಿದ್ದಾರೆ ಎಂಬುದು ಗೊತ್ತಾಗುವುದಿಲ್ಲ. ಅವರನ್ನು ಹುಡುಕಿ ಇಂಥ ವ್ಯಕ್ತಿ ಜೈಲಿನಲ್ಲಿದ್ದಾರೆ, ಅವರನ್ನು ಏತಕ್ಕೆ ಜೈಲಿಗೆ ಹಾಕಿದ್ದೀರಿ ಎಂದು ಕೇಳಿದರೆ ಕಾರಣ ಹೇಳುವುದಿಲ್ಲ. ಅಂಥ ಸಂದರ್ಭಗಳಲ್ಲಿ ಕೋರ್ಟಿಗೆ ಹೋದರೆ ಜಾಮೀನಿನ ಮೇಲೆ ಬಿಡಿ ಎಂದರೆ ಯಾವ ಕೇಸ್‌ನಲ್ಲಿ ಯಾವ ಕಾರಣಕ್ಕಾಗಿ ಹಾಕಿದ್ದಾರೆ ಎಂಬ ಬಗ್ಗೆ ಪೋಲೀಸರಿಂದ ವರದಿ ಬಂದಿಲ್ಲ ಅವರನ್ನು ಯಾವ ಕೇಸ್‌ನಲ್ಲಿ ಅರೆಸ್ಟ್ ಮಾಡಿದ್ದಾರೆ ಎಂಬುದು ಗೊತ್ತಿಲ್ಲ, ಆದ್ದರಿಂದ ಜಾಮೀನಿನ ಮೇಲೆ ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಅನಂತರ ಹೈಕೋರ್ಟಿಗೆ ಬಂದು ಹೇಬಿಯಸ್ ಕಾರ್ಪಸ್ ಅರ್ಜಿ ಹಾಕಿ ನಾನು ನೋಡಿದ್ದೇನೆ, ಇಂಥ ಮನುಷ್ಯ ಜೈಲಿನಲ್ಲಿ ಇದ್ದಾನೆ, ವಿನಾಕಾರಣ ಅವನನ್ನು ಅರೆಸ್ಟ್ ಮಾಡಿದ್ದಾರೆ, ಅರೆಸ್ಟ್ ಮಾಡಿದ ವಿವರಗಳನ್ನು ಕೊಟ್ಟಿಲ್ಲ ಎಂದು ಹೇಳಿ ಅವನನ್ನು ಹಾಜರುಪಡಿಸಿ ಎಂದು ಹೇಳಿದಾಗ ಕೆಲವೊಂದು ಸಾರಿ ಹಾಜರುಪಡಿಸಿದ್ದಾರೆ. ಅನೇಕ ಸಾರಿ ಆದೇಶ ಹೈಕೋರ್ಟ್‌ನಿಂದ ಹೋಗುವ ವೇಳೆಗೆ ನಾವು ಅರೆಸ್ಟ್ ಮಾಡಿಲ್ಲ ಎಂದು ಪ್ರಾಣಾಹುತವಾಗಿರತಕ್ಕ ನಿದರ್ಶನವೂ ಇದೆ ರಾಜ್ಯದಲ್ಲಿ ದೇಶದಲ್ಲಿ. ಮಾನವೀಯ ಮೌಲ್ಯ ರಕ್ಷಣೆ ಮಾಡತಕ್ಕ, ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಇದನ್ನು ಪಕ್ಷಭೇದ ಮರೆತು ಸ್ವಾಗತ ಮಾಡಬೇಕಾಗುತ್ತದೆ. ಇದು ಪಾಸ್ ಆದರೆ ಆಡಳಿತ ಪಕ್ಷಕ್ಕೆ ಮುಖಭಂಗವಾಗುವ ಪ್ರಶ್ನೆ ಇಲ್ಲ. ಆಡಳಿತ ಪಕ್ಷದ ಯಾವುದೇ ಒಂದು ವಿಚಾರಕ್ಕೆ ಅಷ್ಟ ಬರುವುದಿಲ್ಲ. ಪ್ರತಿಷ್ಠೆಯ ಪ್ರಶ್ನೆ ಅಲ್ಲ. ನಾವೆಲ್ಲಾ ಮಾನವರು. ಇಲ್ಲಿರತಕ್ಕ ಸರ್ಕಾರ. ಅಲ್ಲಿರತಕ್ಕ ಸ್ನೇಹಿತರು, ಇಲ್ಲಿರತಕ್ಕ ಶಾಸಕರು ನಾವೆಲ್ಲಾ ಇರತಕ್ಕದ್ದು ಪ್ರಜೆಗಳನ್ನು, ಮತದಾರರನ್ನು, ರಾಜ್ಯದ ಜನತೆಯ ಹಕ್ಕುಗಳನ್ನು ರಕ್ಷಣೆ ಮಾಡುವುದಕ್ಕೆ; ಜೊತೆಗೆ ನಮ್ಮ ಹಕ್ಕುಗಳನ್ನು ನಾವು ರಕ್ಷಣೆ ಮಾಡಿದಂತಾಗುತ್ತದೆ. ಈಗ ನಡೆಯುತ್ತಿರುವ ಕಾನೂನುಬಾಹಿರ ಕೆಲಸ ನಡೆಯಬಾರದು, ಸಮಾನತೆ ಬರಬೇಕು., ಸಂವಿಧಾನದ ಕಲಂ 21 ಮತ್ತು 22ನ್ನು ಎತ್ತಿಹಿಡಿದು ಇದ್ದ ಕಾನೂನನ್ನು ಬದಲಾವಣೆ ಮಾಡಿದ್ದ ಕಾನೂನಿನ ಚೌಕಟ್ಟಿನಲ್ಲಿ ಅಧಿಕಾರವನ್ನು ಚಲಾಯಿಸುವಾಗ ಮಾಹಿತಿ ಆ ವ್ಯಕ್ತಿಗೆ ಕೊಟ್ಟು ಜೈಲಿಗೆ ಕರೆದುಕೊಂಡುಹೋದರೆ ಕಾನೂನು ಪ್ರಕಾರ ಮುಂದಿನ ಕ್ರಮ ಜರುಗಿಸುವುದಕ್ಕೆ ಯೋಗ್ಯವಾಗುತ್ತದೆ ಎಂದು ಹೇಳುತ್ತಾ ಮಾನ್ಯ ನಂಜುಂಡ ಸ್ವಾಮಿಯವರು ತಂದಿರತಕ್ಕ ಈ ತಿದ್ದುಪಡಿ ಈ ಶಾಸನಸಭೆಗೆ ಕಿರೀಟವನ್ನು ಇಟ್ಟಂತಾಗಿದೆ ಎಂದು ಹೇಳುತ್ತೇನೆ. ಇದನ್ನು ತಂದರೆ ಯಾರಿಗಾದರೂ ವೈಯಕ್ತಿಕವಾಗಿ ಪಕ್ಷಕ್ಕೆ ಕಳಂಕ ಬರುವುದಿಲ್ಲ, ನಮಗೆಲ್ಲರಿಗೂ ಕೀರ್ತಿತರತಕ್ಕ ಶಾಸನವನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಎ.ಪಿ. ವೆಂಕಟೇಶ್ :– ಮಾನ್ಯ ಅಧ್ಯಕ್ಷರೇ, ಹಿರಿಯರಾದ ಪ್ರೊ. ನಂಜುಂಡಸ್ವಾಮಿಯವರು ಏನು ತಿದ್ದುಪಡಿ ತಂದಿದ್ದಾರೆ ಇದು ಬಹಳ ಸೂಕ್ತವಾಗಿದ್ದು ಇದಕ್ಕೆ ನಮ್ಮ ಜನತಾಪಕ್ಷದ ಪರವಾಗಿ ಬೆಂಬಲವನ್ನು ವ್ಯಕ್ತಮಾಡುತ್ತೇನೆ. ಈ ಸಮಯದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಅವರು ಗೃಹ ಇಲಾಖೆಯಲ್ಲಿ ಸಾಕಷ್ಟು ಬದಲಾವಣೆಗಳು ಆಗಬೇಕೆಂದು ಹೇಳಿದ್ದಾರೆ. ಇದಕ್ಕೆ ಕಾರಣ ಎಂದರೆ, ಸೆಪ್ಟೆಂಬರ್ ತಿಂಗಳಲ್ಲಿ ಹುಣಸೂರಿನಲ್ಲಿ ಸತ್ತಿರುವ ಇಬ್ಬರು ಪರಿಶಿಷ್ಟ ಜಾತಿಯವರ ಮೇಲೆ ಸೆಕ್ಷನ್ 107 ಜಾರಿ ಮಾಡಿ ಅವರಿಬ್ಬರ ಮೇಲೆ ಕೇಸ್ ಹಾಕಿದ್ದಾರೆ. ಯಾರ ಹೆಸರನ್ನು ಹೇಳುತ್ತಾರೆ ಅವರ ಹೆಸರನ್ನು ಬರೆದು ಅವರ ಮೇಲೆ ಚಾರ್ಜ್‌ಶೀಟ್ ಹಾಕುವ ಪ್ರವೃತ್ತಿ ಸರಿಯಾದುದಲ್ಲವಾದ್ದರಿಂದ ಮಾನ್ಯ ನಂಜುಂಡಸ್ವಾಮಿಯವರು ಏನು ಕಾನೂನು ಬದಲಾವಣೆ ಮಾಡಬೇಕೆಂದು ತಂದಿದ್ದಾರೆ ಇದನ್ನು ಸರ್ವಾನುಮತದಿಂದ ಎಲ್ಲರೂ ಒಪ್ಪಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

† ಶ್ರೀ ಧರ್ಮಸಿಂಗ್ (ಗೃಹ ಸಚಿವರು) :– ಮಾನ್ಯ ಉಪಾಧ್ಯಕ್ಷೆಣಿಯವರೇ, ಈ ದಿನ ಈ ಸದನದ ಬಹಳ ಅನುಭವಿಗಳೂ ಮತ್ತು ಶಾಸನ ಸಭೆಯಲ್ಲಿ ಸೂಕ್ತ ಸಲಹೆಗಳನ್ನು ಕೊಡತಕ್ಕ ನಂಜುಂಡಸ್ವಾಮಿಯವರು ಒಂದು ತಿದ್ದುಪಡಿ ಮಸೂದೆಯನ್ನು ಸದನದಲ್ಲಿ ಇಟ್ಟಿದ್ದಾರೆ. ಅವರ ಮನಸ್ಸಿನಲ್ಲಿ ಇರತಕ್ಕ ಕಳವಳ ಏನಿದೆ ಮತ್ತು ಯಾವ ರೀತಿಯಾಗಿ ಪೋಲೀಸ್ ಇಲಾಖೆಯವರು ಕೂಡಾ ಅದನ್ನು ದುರುಪಯೋಗ ಮಾಡುತ್ತಿದ್ದಾರೆ ಎಂಬುದನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಅರೆಸ್ಟ್ ವಿಥೌಟ್ ವಾರೆಂಟ್ ಎನ್ನುವ ಮಾತನ್ನು ಪ್ರಸ್ತಾಪ ಮಾಡಿ 41 ಸೆಕ್ಷನ್‌ನಲ್ಲಿ ಇವತ್ತು ತಿದ್ದುಪಡಿ ಬೇಕು ಎಂದು ಅವರು ಹೇಳಿದ್ದಾರೆ. ಮತ್ತು ಮಾನ್ಯ ವಾಟಾಳ್‌ನಾಗರಾಜ್ ಅವರು, ಏಕಾಂತಯ್ಯನವರು, ಗೆಳೆಯ ವೆಂಕಟೇಶ್ ಅವರು, ಎಲ್ಲರೂ ಕೂಡಾ ಈ ಒಂದು ತಿದ್ದುಪಡಿ ಸರ್ಕಾರ ಒಪ್ಪಲೇಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಕಳೆದ 40 ವರ್ಷಗಳಿಂದ ಇದು ನಮ್ಮ ಎದುರಿಗೆ ಇದ್ದು, ಇದರ ಬಗ್ಗೆ ಯಾವಾಗಲೂ ಕೂಡಾ ಗಮನಕೊಟ್ಟಿಲ್ಲದಿದ್ದು ಇಡೀ ದೇಶದಲ್ಲೇ ಪ್ರಪ್ರಥಮವಾಗಿ ಕರ್ನಾಟಕದ ವಿಧಾನಸಭೆಯಲ್ಲಿ ಈ ತಿದ್ದುಪಡಿಯನ್ನು ನಾನು ಮಂಡಿಸಿದ್ದೇನೆಂದು ಶ್ರೀ ನುಜುಂಡಸ್ವಾಮಿಯವರು ಹೇಳಿದ್ದಾರೆ. ಇವತ್ತು ನಾನು ಅವರಿಗೆ ಹೇಳಬಯಸುತ್ತೇನೆ. ಇವತ್ತು ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇವತ್ತು ಜನರ ಸಂರಕ್ಷಣೆ ಇದೆ. ಕಾನೂನು ವ್ಯವಸ್ಥೆ ಎಂಬುದು ಇದೆ. ಇವೆಲ್ಲವನ್ನೂ ಕೂಡಾ ಮಾಡುವುದಕ್ಕೆ ಕೂಡಾ ಇವತ್ತಿನದಿವಸ ನಮ್ಮುದೇ ಒಂದು ಕಾನೂನು ಬೌಕಟ್ಟಿನಲ್ಲಿ ನಾವು ಕೆಲಸ ಮಾಡತಕ್ಕದ್ದನ್ನು ನಾವು ಅಳವಡಿಸಿಕೊಂಡು ಬಂದಿದ್ದೇವೆ. ಅದನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಯಾರೇ ಆದರೂ ದೇಶದ ಪರಿಸ್ಥಿತಿ ಏನಿದೆ, ಇವತ್ತಿನ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು ಯಾರನ್ನೂ ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾದ್ದು ನಿಜ. ಇವತ್ತು ಸರ್ಕಾರವನ್ನು ನಡೆಸುವವರಿಗೆ ಪ್ರಜಾಪ್ರಭುತ್ವದಲ್ಲಿ ಹ್ಯೂಮಾನಿಟೇರಿಯನ್ ಕನ್ಸಿಡರೇಷನ್ ಕೂಡಾ ಬೇಕು. ಆದರೆ ಇವತ್ತು ಕಾನೂನು ವ್ಯವಸ್ಥೆಯನ್ನು ನೋಡತಕ್ಕದ್ದೂ ಕೂಡಾ ಸರ್ಕಾರದ ಮೇಲೆಯೇ ಇದೆ ಇವತ್ತು ಮಾನ್ಯ ಸದಸ್ಯರು ಹೇಳಿದರು. ಗಲಾಟೆಯಾದರೆ ನಾವು ಅವರಿಗೆ ಸಾಕಷ್ಟು ಸಮಯ ಕೊಟ್ಟು ರೀಸನ್ಸ್ ಕೊಟ್ಟು ಏಕೆ ಅರೆಸ್ಟ್ ಮಾಡುತ್ತೇವೆನ್ನುವ ರೀತಿಯಲ್ಲಿ ಕೊಟ್ಟುಬಿಟ್ಟರೆ ಅಪರಾಧಿ ಎಲ್ಲೋ ಓಡಿಹೋಗುತ್ತಾನೆ. ಆಗ ನಾವು ಪರಿಸ್ಥಿತಿಯನ್ನು ನಿಯಂತ್ರಿಸುವುದಕ್ಕಾಗುವುದಿಲ್ಲ. ಅದನ್ನು ನಾವು ಮಾಡುವುದಕ್ಕಾಗುವುದಿಲ್ಲ. ಇದೆಲ್ಲಾ ಪ್ರಸ್ತಾಪ ಸರ್ಕಾರಕ್ಕೆ ಬಂದಮೇಲೆ ಸಂಪುಟದಲ್ಲಿ ಹಾಗೂ ಎಲ್ಲಾ ಕಡೆ ಚರ್ಚೆ ಮಾಡಿ, ಸಂಬಂಧಪಟ್ಟ ಅಧಿಕಾರಿಗಳ ಜೊತೆ ಚರ್ಚೆ ಮಾಡಿ, ನಂಜುಂಡಪ್ಪನವರು ಈ ಒಂದು ತಿದ್ದುಪಡಿ ತರಬೇಕಾದರೆ ಅವರ ಮನಸ್ಸಿನಲ್ಲಿ ಪ್ರಾ ಕ್ಟಿಕಲ್ಲಾಗಿ, ವ್ಯಾವಹಾರಿಕವಾಗಿ ಇದೆಲ್ಲಾ ನೋಡಿರಬಹುದು, ಇದರ ಬಗ್ಗೆ ಅವರು ಕಳವಳ ವ್ಯಕ್ತ ಮಾಡುತ್ತಿದ್ದಾರೆ. ಇದರ ಬಗ್ಗೆ ಏನು ಮಾಡಬೇಕೆನ್ನುವ ರೀತಿಯಲ್ಲಿ ನೋಡಿದಾಗ ನಾವು ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇವತ್ತಿನದಿವಸ ಕಾನೂನು ಪರಿಪಾಲನೆ ಮಾಡಬೇಕಾಗಿದೆ. ಇದು ಲಾ ಅಂಡ್ ಆರ್ಡರ್ ಪ್ರಶ್ನೆ ಇದೆ. ವಿಶೇಷವಾಗಿ ಇವತ್ತಿನ ಸಂಧಿಗ್ಧ ಪರಿಸ್ಥಿತಿಯಲ್ಲಿ ಈ ತಿದ್ದುಪಡಿಯನ್ನು ಒಪ್ಪಲಿಕ್ಕಾಗುವುದಿಲ್ಲವೆಂದು ನಾನು ಕೂಡಾ ಬಹಳ ದುಃಖದಿಂದ ಸರ್ಕಾರದ ಕಡೆಯಿಂದ ಅವರಿಗೆ ನಾನು ಹೇಳಬಯಸುತ್ತೇನೆ. ಆದರೂ ಕೂಡ ತಮ್ಮ ಮನಸ್ಸಿನಲ್ಲಿ ಏನು ಶಂಕೆ ಇದೆ ಅದರ ಬಗ್ಗೆ ಸರ್ಕಾರ ಗಮನಹರಿಸುವುದು. ಅದು ನಮ್ಮ ಕರ್ತವ್ಯವಿದೆ, ಸರ್ಕಾರ ಅದನ್ನು ವಿಚಾರ ಮಾಡುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಬೇರೆ ಕಡೆಗೆ ರಾಜಕೀಯವಾಗಿ ಏನೋ ಆಗುತ್ತಿದೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಸರ್ಕಾರದ ಮತಿಯಿಂದ ಅದು ಆಗಲಾರದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳುತ್ತೇನೆ. ಈ ಬಗ್ಗೆ ಡಿಸ್‌ಕಷನ್ ಬೇರೆ ಬೇರೆ ಹಂತದಲ್ಲಿ ಆಗಿದೆ. The existing laws have stood the test of time and judicial scrutiny. Even the Law Commission, which has made a very comprehensive review of the Code of Criminal Procedure, did not find it necessary to suggest any change in the provisions of Section 41 of the Cr.P.C. Even when the amendment was passed by the parliament, they also did not consider it necessary to make any fundamental changes in the basic provisions relating to arrest of persons in cognisable offences. You have referred to Articles 22 and 21. There are sufficient safeguards available under Article 22 of the Constitution of India which have been dealt by the Supreme Court in various judgements, extensively and they have relt to retain it without any changes even under Cr.P.C. ಈ ತರಹವಾಗಿ ಅವರು ಹೇಳತಕ್ಕದ್ದು ಇದು

ಎಲ್ಲಾ ಹಂತದಲ್ಲೂ ಇದರ ಬಗ್ಗೆ ವಿಚಾರ ಮಾಡಲಾಗಿದೆ. ಆದರೆ ಇವತ್ತಿನ ದಿವಸ ಮಾನ್ಯ ನಂಜುಂಡಸ್ವಾಮಿಯವರು ಏನು ತಿದ್ದುಪಡಿ ತಂದಿದ್ದಾರೆ ಅದನ್ನು ಸರ್ಕಾರ ಒಪ್ಪಲಿಕ್ಕೆ ಆಗುವುದಿಲ್ಲವೆಂದು ಬಹಳ ಖೇದದಿಂದ ಹೇಳುತ್ತೇನೆ. ಅದನ್ನು ಮಾನ್ಯಸದಸ್ಯರು ವಾಪಸ್ಸು ತೆಗೆದುಕೊಳ್ಳಬೇಕೆಂದು ಪ್ರೆಸ್ ಮಾಡಬಾರದು. ಮಾನ್ಯ ಸದಸ್ಯರು ಏನು ತಿದ್ದುಪಡಿಯನ್ನು ತಂದಿದ್ದಾರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಮಾನ್ಯ ಉಪಾಧ್ಯಕ್ಷೆಯವರೆ, ಹೇಗೆ ಈ ಆರ್ಟಿಕಲ್ 22 ಸಂವಿಧಾನಕ್ಕೆ ಬಂತು ಎನ್ನುವುದನ್ನು ಸ್ವಲ್ಪ ನಾನು ತಿಳಿಸಬೇಕು. ಆರ್ಟಿಕಲ್ 22 ಅನ್ನು ನಾನು ಓದುತ್ತೇನೆ. ಅದು ಈ ರೀತಿ ಇದೆ. Article 22, Para 1 :

"No person who is arrested shall be detailed in custody without being informed as soon as may be of the grounds of such arrest nor shall he be denied the right to consult and be defended by a legal practitioner of his choice."

Article 22 para 2 :

"Every person who is arrested and detained in custody shall be produced before the nearest magistrate within a period of 24 hours of such arrest excluding the time necessary for the journey from the placce of arrest to the court of Magistrate and no such person shall be detained in custody beyond the said period without the authority of a Magistrate."

ಈ ಪ್ರಾವಿಷನ್ ಅನ್ನು ನಾವು ಸಂವಿಧಾನಕ್ಕೆ ಸೇರಿಸಿಕೊಳ್ಳುವುದಕ್ಕೆ ಮುಂಚೆ ಕ್ರಿಮಿನಲ್ ಪ್ರೊಸಿಜರ್ ಕೋಡ್‌ನಲ್ಲಿ ಇದು ಇದೆ. ಇದನ್ನು ಸಂವಿಧಾನಕ್ಕೆ ಸೇರಿಸುವ ಅವಶ್ಯಕತೆ ಇರಲಿಲ್ಲ. ಡಾ : ಅಂಬೇಡ್ಕರ್‌ರವರು ಹೇಳಿದ ಮಾತನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ಅದು ಈ ರೀತಿ ಇದೆ.

"On September 15, 1949, Dr.Ambedkar moved that a new article 15 A which as amended corresponds to Article 22 of our Constitution, be adopted. Speaking on the motion Dr. Ambedkar said, We are therefore now by introducing Article 15 A, making, if I may say so compensation for what was done then in passing Article 15. In other words, we are providing for the substance of the law of due process by the introduction of Article 15 A. Article 15 A nearly lifts from the provisions of the Criminal Procedure Code two of the most fundamental principles which every civilised country follows as principles of international justice.

It is quite true that these two provisions contained in clause 1 and clause 2 are already to be found in the Criminal Procedure Code and therefore probably it might be said that we are not really making any fundamental changes but we are, as I contend, making a fundamental change because what we are doing by introduction of Article 15 A is to put a limitation upon the authority both of Parliament as well as of Provincial Legislatures not to abrogate these two provisions be- ause they are now introduced in our Constitution itself."

ಈ ಸೆಕ್ಷನ್‌ಗೆ ಏತಕ್ಕೆ ಇದನ್ನು ಸೇರಿಸಬೇಕೆಂದು ಹೇಳುತ್ತಿದ್ದೇನೆ ಎಂದರೆ, ಇದು ದುರುಪಯೋಗ ಆಗುತ್ತಿರುವ ಕಾರಣದಿಂದ ಹಿಂದಿನ ಸರ್ಕಾರ ಇದ್ದಾಗಲೂ ನಾವು ಇದನ್ನು ಸಲಹೆ ಮಾಡಿದ್ದೆವು. ಶಾಸನಸಭೆಯ ಒಳಗಡೆಯಿಂದ ಅಲ್ಲದೇ ಇರಬಹುದು. ಆದರೆ ಶಾಸನಸಭೆಯ ಹೊರಗಡೆಯಿಂದ ನಾವು ಈ ತಿದ್ದುಪಡಿ ತರಬೇಕೆಂದು ಒತ್ತಾಯ ಮಾಡಿದ್ದೆವು. ಈಗ ಸ್ವಲ್ಪ ಕಾಲದ ಹಿಂದೆ ನಾನು ಸರ್ಕಾರಗಳ ಬಗ್ಗೆ ವಿಶ್ವಾಸ ಕಳೆದುಕೊಂಡಿಲ್ಲವೆಂದು ಹೇಳಿದ್ದೆ. ಆದರೆ ಈ ಅಭಿಪ್ರಾಯವನ್ನು ಇವತ್ತು ಬದಲಾವಣೆ ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ ಈ ತಿದ್ದುಪಡಿಯನ್ನು ತಾವು ದಯವಿಟ್ಟು ಮತಕ್ಕೆ ಹಾಕಬೇಕು. ಏಕೆಂದರೆ ಕರ್ನಾಟಕದ ಜನರಿಗೆ ಹಿಂದೆ ಇದ್ದ ಜನತಾದಳ ಸರ್ಕಾರ ಎಂಥದ್ದು ಎಂದು ಗೊತ್ತಾಗಿದೆ. ಈಗಿರುವ ಕಾಂಗ್ರೆಸ್ ಸರ್ಕಾರ ಎಂಥಾದ್ದು ಎಂದು ಇವತ್ತು ಗೊತ್ತಾಗಲಿ. ದಯವಿಟ್ಟು ಇದನ್ನು ಮತಕ್ಕೆ ಹಾಕಬೇಕೆಂದು ನಾನು ಪೀಠವನ್ನು ಒತ್ತಾಯ ಮಾಡುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾವ ಏನೆಂದರೆ "1990ನೇ ಇಸವಿಯ ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಈ ಸಭೆ ಪರ್ಯಾಲೋಚಿಸುವುದು."

ಪ್ರಸ್ತಾವವು ಅಂಗೀಕರಿಸದೆ ತಿರಸ್ಕರಿಸಲ್ಪಟ್ಟಿತು

Prof. M.D. Najunda Swamy :- I am walking out in protest conveying my displeasure to the Government .

(The hon.member withdrew from the House)

ಶ್ರೀ ವಾಟಾಳ್ ನಾಗರಾಜ್ :– ನಾವು ಸಹ ಇದನ್ನು ಪ್ರತಿಭಟಿಸಿ ಹೊರಗೆ ಹೋಗುತ್ತೇವೆ.

(ಪೋಲೀಸ್ ರಾಜ್ಯದ ಪೋಲೀಸ್ ಕಾಯಿದೆ ಬದಲಾವಣೆ ಆಗಬೇಕು. ಇಂಥ ಕೆಟ್ಟ ಕಾಯಿದೆ ಬದಲಾವಣೆ ಆಗಬೇಕು – ಎಂದು ಘೋಷಣೆ ಕೂಗುತ್ತಾ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಸಭೆಯಿಂದ ಹೊರನಡೆದರು. ಅವರ ಜೊತೆಗೆ ಜನತಾದಳ ಸದಸ್ಯರೂ ಸಭಾತ್ಯಾಗ ಮಾಡಿದರು).

ಪ್ರಕಟಣೆ

ಉಪಾಧ್ಯಕ್ಷರು :– ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಸಭೆಯಿಂದ ಅಂಗೀಕಾರವಾದ ಕರ್ನಾಟಕ ಧನವಿನಿಯೋಗ (ನಂ.3) ವಿಧೇಯಕ, 1990 ಕರ್ನಾಟಕ ವಿಧಾನ ಪರಿಷತ್ತಿನಲ್ಲಿ 30.11.1990ರಂದು ಅನುಮೋದಿಸಲಾಯಿತೆಂದು ತಿಳಿಸುತ್ತೇನೆ."

ಖಾಸಗಿ ಕಾರ್ಯಕಲಾಪಗಳು

ರಾಜ್ಯದಲ್ಲಿ ಗ್ರಾನೈಟ್ ಕಲ್ಲುಗಳ ವ್ಯವಹಾರವನ್ನು ರಾಷ್ಟ್ರೀಕರಣಗೊಳಿಸುವುದು.

ಉಪಾಧ್ಯಕ್ಷರು :– ಶ್ರೀ ವೆಂಕಟೇಶ್‌ರವರೇ, ನೀವು ಮಾತನಾಡುತ್ತೀರಾ?

ಶ್ರೀ ಎಂ.ಪಿ. ವೆಂಕಟೇಶ್ :– ನಾನು ಐದು ನಿಮಿಷ ಮಾತನಾಡಿದ ಮೇಲೆ ತಾವು ಸಭೆಯನ್ನು ಮುಂದಕ್ಕೆ ಹಾಕಬಹುದು.

ಉಪಾಧ್ಯಕ್ಷರು :– ಸರಿ.

† ಶ್ರೀ ಎಂ.ಪಿ. ವೆಂಕಟೇಶ್ :– ಮಾನ್ಯ ಉಪಾಧ್ಯಕ್ಷರೇ, ಈ ಗ್ರಾನೈಟ್ ಕಲ್ಲುಗಳ ಬಗ್ಗೆ ಈಗಾಗಲೇ ಮಾನ್ಯ ಉಪನಾಯಕರಾದ ಶ್ರೀ ಸಿದ್ಧಾರವರು ಪ್ರಸ್ತಾಪ ಮಾಡಿದಹಾಗೆ ಶ್ರೀ ವಾಟಾಳ್ ನಾಗರಾಜ್‌ರವರು, ನಾನು ಮತ್ತು ಶಿವಕುಮಾರ್, ಪ್ರೊ: ನಂಜುಂಡಸ್ವಾಮಿಯವರು ಒಂದು ಸಭೆ ಕರೆದು ಮಾತನಾಡಿ ಎಂದು ಹೇಳಿದ ಹಾಗೆ ನಿನ್ನೆ ದಿವಸ ನಾವು ಸಭೆ ಸೇರಿದ್ದೆವು. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಎಲ್ಲ ಅಧಿಕಾರಿಗಳೂ ಸೇರಿದ್ದರು. ಕಳೆದ ಸರ್ಕಾರ ಒಂದು ತಿದ್ದುಪಡಿಯನ್ನು ಸಿಎ 304, ಎಂ.ಆರ್.ಸಿ. 87 ದಿನಾಂಕ 27 ಮೇ 1990ರಲ್ಲಿ ಕಳಿಸಿದೆ. ಇದರ ಬಗ್ಗೆ ದೀರ್ಘವಾದ ಚರ್ಚೆ ಮಾಡಿದಾಗ ಕೆಲವು ವಿಷಯಗಳನ್ನು ಪುನರ್ ಪರಿಶೀಲನೆ ಮಾಡುತ್ತೇವೆ ಎಂದು ಅವರು ಒಪ್ಪಿಕೊಂಡರು ಏನು ಈ ಫ್ಯಾಕ್ಟರಿಗಳಿಗೆ ಕೊಡಬೇಕೆಂದು ನಿಯಮ ಇತ್ತು, ಅದನ್ನು ಸಡಿಲ ಮಾಡುತ್ತೇವೆ ಎಂದು ಅವರು ಚರ್ಚೆ ಮಾಡಿದಾಗ ಒಪ್ಪಿಕೊಂಡಿದ್ದರು. ಈಗ ಹಿಂದೆ ಇದ್ದಂಥ ಸರ್ಕಾರ ಬಹಳ ತರಾತುರಿಯಲ್ಲಿ ರಾಷ್ಟ್ರೀಕರಣ ಆದಮೇಲೆ ಒಂದು ಆರ್ಡಿನೆನ್ಸನ್ನು ತಂದಿತ್ತು. ಈ ಆರ್ಡಿನೆನ್ಸನ್ನು ಕೂಡಲೇ ಮಾಡಿತು. ಬಹುಶ: ಹಿಂದಿನ ಸರ್ಕಾರದ ಮಂತ್ರಿಗಳೂ ಹೋಗಿದ್ದಾರೆ, ಮತ್ತು ಹಿಂದಿನ ಸರ್ಕಾರವೂ ಹೋಗಿದೆ. ಈಗ ಹೊಸ ಸರ್ಕಾರ ರಚನೆಯಾಗಿದೆ, ಹೊಸ ಅಧಿಕಾರಿಗಳೂ ಬಂದಿದ್ದಾರೆ, ಹೊಸ ಮಂತ್ರಿಗಳೂ ಬಂದಿದ್ದಾರೆ. ಆದ್ದರಿಂದ ನಾವು ಹೊಸದಾಗಿ ಪ್ರಸ್ತಾಪ ಮಾಡುವಂತಾದ್ದು, ರೈತರ ಬಗ್ಗೆ ಮತ್ತು ಈ ಗ್ರಾನೈಟ್ ಬಗ್ಗೆ ಚರ್ಚೆ ಮಾಡಲು ಸರ್ಕಾರದವರೂ ಒಪ್ಪಿದ್ದಾರೆ. ಇದನ್ನು ತಾವು ಮುಂದಕ್ಕೆ ಹಾಕುತ್ತೇವೆಂದು ಹೇಳಿದರೆ...

ಉಪಾಧ್ಯಕ್ಷರು :– ತಮಗೆ ಇನ್ನೂ ಎಷ್ಟು ಹೊತ್ತು ಬೇಕು.

ಶ್ರೀ ಎಂ.ಪಿ. ವೆಂಕಟೇಶ್ :– ನನಗೆ ಇನ್ನೂ ಅರ್ಧಗಂಟೆ ಕಾಲ ಬೇಕಾಗುತ್ತದೆ.